ಟೈಂ ಟೇಬಲ್ ಅದು ಇದು ಏನಿತ್ತಾಗ? ಯಾವ ಮೇಷ್ಟ್ರು ಫ್ರೀನೋ ಅವರೇ ಬಂದುಬಿಡೋರು. ಗ್ರಾಚಾರ ಎಂಗಿರುತ್ತೆ ಅಂದ್ರೆ ಹಗ್ಗ ಹಾವಾಗೋ, ನೀರೂ ಆಸಿಡ್ ಆಗೋ, ಕಡ್ಲೆಬೀಜವೂ ಬಾಂಬಾಗಬಹುದೇನೋ ಅನ್ನಂಗೆ ಖಾಕಿ ಬಣ್ಣದ ಬೈಂಡ್ ಹಾಕಿದ ಹಾಜರಿ ಪುಸ್ತಕ ಹಿಡಿದು ಅದೇ ಬೋಳು ತಲೆಯ ನಮ್ಮ ಈಶ್ವರಪ್ಪ ಮಾಸ್ತರು ಆಫೀಸ್ ರೂಮಿಂದ ಬರುತ್ತಿದ್ದಾರೆ. ಒಂದು ಕೈಲಿ ಹಾಜರಿ, ಮತ್ತೊಂದು ಕೈಲಿ ಸಣ್ಣ ಬಿದರ ಕಡ್ಡಿ. ನಮ್ಮ ಕಣ್ಗೆ ಪಾಶ ಹಿಡಿದ ಯಮ ನಮ್ಮತ್ತಲೇ ಬರುವಂತೆ ಕಾಣುತ್ತಿತ್ತು!

ನಂಜಯ್ಯ, ಪಟೇಲ, ಚಂದ್ರ ನಮ್ಮನ್ನು ನೋಡಿ ಪಂಚಾಯಿತಿ ಎಲೆಕ್ಷನ್‌ನಲ್ಲಿ ಗೆದ್ದವರಂತೆ ಬೀಗುತ್ತಿದ್ದರು. ನಿನ್ನೆ ಚಕ್ಕರ್ ಹಾಕಿದ್ದ ಮಾಲಿಕ್, ಗುರಾನಿ ಮಂಡ, ಪ್ರಕಾಶ, ಲಂಬು ಬಸ್ಯ ಮತ್ತು ನಾನು ಕೊನೆಯ ಆಸೆ ಕೇಳದೇ ನೇಣಿಗೆ ನೇತಾಡೋ ಕೈದಿಗಳಂತೆ ಚಡಪಡಿಸತೊಡಗಿದೆವು.

ಬಂದರು, ಕುಂತರು. ಮರದ ಕುರ್ಚಿ, ಮರದ ಟೇಬಲ್, ಅದೂ ಅಲ್ಲಾಡುವಂಥವು. ಇದ್ದವರೇ ಇಪ್ಪತ್ತೈದು ಮೂವತ್ತು ಮಂದಿ ಹುಡುಗರು. ಹಾಜರಿ ಕೂಗಿದರು. ಬಂದವರು ಹೇಳಿದರು, ಬಾರದವರಿಗೆ ಕಾರಣ ಕೇಳಿ ಸುಮ್ಮನಾದರು. ನಮ್ಮ ಸರದಿ ಬಂದಾಗ:

'ನಿನ್ನೆ?'

'ಹುಷಾರಿದ್ದಿಲ್ಲ ಸಾರ್' ಅಂದೆ.

'ಎರಡು ಕೈ ಎರಡು ಕಾಲು ಕಟ್ ಆದರೂ ಉಲ್ಡಾಡ್ತಾ ಬಂದು ಎಸ್ ಸಾರ್ ಅನ್ನಬೇಕು, ಹಾಜರಿ ಮುಖ್ಯ' ಅಂದರು.

'ಹು ಸಾರ್' ಅಂತ ಕೂತೆ.

ನಿನ್ನೆ ಚಕ್ಕರ್ ಹೊಡೆದವರಿಗೆಲ್ಲಾ ಅದೇ ಮಾತು ಹೇಳಿದರು. ಭಾನುವಾರದ ಘಟನೆ ಮೇಷ್ಟ್ರಿಗೆ ನೆನಪೇ ಇಲ್ಲ!

ಯಮಸ್ವರೂಪಿಯಾಗಿ ಕಂಡಿದ್ದ ಅದೇ ಗುರುಗಳು ಈಗ ಮನೆದೇವರಂತೆ ಕಂಡರು! ಅದಕ್ಕೆ ನೋಡಿ ಗುರುದೇವೋಭವ ಅನ್ನೋದು!

ಆಗ ಎಲ್ಲಾ ಮೇಷ್ಟ್ರು ಎಲ್ಲಾ ವಿಷಯ ಕಲಿಸಬೇಕಿತ್ತು. ಈ ನಮ್ಮ ಈಶ್ವರಪ್ಪ ಮೇಷ್ಟ್ರು ವಿಜ್ಞಾನ ಅತ್ಯಂತ ಸರಳವಾಗಿ ಹೇಳಿಕೊಡೋರು. ಅದೂ ಎಲ್ಲವೂ ಪ್ರಾಯೋಗಿಕವಾಗಿ!

ಒಬ್ಬ ಹುಡುಗನ್ನ ಕರೆದು ಎದುರಿಗೆ ನಿಲ್ಸಿ ತಮ್ಮ ಎರಡು ಬೆರಳು ನಿಂತವನ ಕಣ್ಣಿಗೆ ಅಕ್ಷರಶಃ ಚುಚ್ಚಿ – ಕಣ್ಣು, ಮೂಗು ಹಿಂಡಿ ಮೂಗೂ ಬಾಯಲ್ ಬೆರಳಿಟ್ಟು, ಬಾಯೀ ಗಂಟಲೊತ್ತಿ, ಗಂಟಲೂ ಅದರ ಕೆಳಗೆ ಅನ್ನನಾಳ ಜಠರ... ಹೀಗೆ ನೇರವಾಗಿ ಕಲಿಸೋರು. ಸಂಜೆ ಅಷ್ಟೊತ್ತಿಗೆ ಪ್ರತಿ ಹುಡುಗನೂ,

ಕಣ್ಣು
ಮೂಗು
ಬಾಯಿ
ಗಂಟಲು
ಅನ್ನನಾಳ
ಜಠರ ಅಂತ ಹೇಳುತ್ತಾ ಹಾಡುತ್ತಾ ಕಲಿತುಬಿಡುತ್ತಿದ್ದ. ಈಗ? ಮಕ್ಕಳನ್ನು ಮುಟ್ಟಂಗಿಲ್ಲ, ಬೈಯಂಗಿಲ್ಲ, ಹೊಡೆಯಂಗಿಲ್ಲ! ಕೊರೊನಾ ಬಂದಮೇಲಂತೂ ಹತ್ತಿರವೂ ಹೋಗಂಗಿಲ್ಲ ಬಿಡಿ!

ಈಗಿನ ಮಕ್ಳು ಮನರಂಜನೆ ಅಂದ್ರೆ ಮೊಬೈಲ್ ಅಂದ್ಕಂಡವೆ! ಆಗ ಮೇಷ್ಟರಿಗೆ ಮಕ್ಕಳು ಮನರಂಜನೆ, ಮಕ್ಕಳಿಗೆ ಮೇಷ್ಟ್ರೇ ಮನರಂಜನೆ; ಸಾಲಿಗುಡಿನೇ ಟಾಕೀಸು ಮತ್ತು ನಾಟಕದ ಕಂಪನಿ!

ನಮ್ಮ ಮಂಜ ಅದೇ ಜೋಗ ಮಂಜ, ಮಜ್ಗೆ ಮಂಜ , ಹಿಂಗಂದ್ರೆ ನಿಮಗೆಂಗ್ ತಿಳಿಬೇಕ್ಹೇಳಿ... ಮಂಜುನಾಥ ಅಂತ ನಮ್ಮ ಮಿಡ್ಲಿಸ್ಕೂಲ್ ಗೆಳೆಯ. ಅವರ ಮನೇಲೆ ಕರಾವು ಬಹಳ. ಮಜ್ಗೆ ಅಂತೂ ಬಕೀಟ್ ಗಟ್ಲೆ. ನಾನು ನಮ್ಮ ಕೂನ ಚಂದ್ರ ಅವರ ಮನೆಗೆ ಭೇಟಿ ಕೊಟ್ಟು ಸದಾ ಮಜ್ಗೇನೇ ಎಣ್ಣೆ ಹೊಡೆದ ರೇಂಜಿಗೆ ಕುಡಿದು ಬರ್ತಿದ್ವಿ! ಹಂಗಾಗಿ ನಮ್ಮಿಬ್ಬರ ಪಾಲಿಗವನು ಮಜ್ಗೆ ಮಂಜ!



ಅವರ ಬೀದೀಲಿ ಜೋಗಿಗಳು ಅಂದ್ರೆ ಎಣ್ಣೆ ಜೋಗಿಗಳು ಬಂದು ಬಿಡಾರ ಹೂಡಿ ನಾಲ್ಕಾರು ದಿನ ಇದ್ರು. ಅಂತವು ಇಂತವು ಹಾಡು ಇವನೂ ಕೇಳಿಸ್ಕಂಡು ಆಗಾಗ ಹಾಡ್ತಿದ್ದ. ಹಂಗಾಗಿ ಜೋಗ ಮಂಜ ಎಂದೇ ಖ್ಯಾತಿ!

ನಮಗೆ ಮಾರಲ್ ಪೀರಿಯಡ್ ಅಂತಾನೇ ಒಂದು ಕ್ಲಾಸ್ ಇರೋದು. ಅದರಲ್ಲಿ ಪಾಠ ಗೀಟ ಇರದೇ ಬರೀ ಹಾಡು, ಡಾನ್ಸು, ನೀತಿಕತೆ, ಗೋವಿನ ಹಾಡು, ಪಂಚತಂತ್ರದ ಕತೆ, ರಾಮಾಯಣ, ಮಹಾಭಾರತದ ಕತೆ ಹೇಳೋರು ಮತ್ತು ಹೇಳಿಸೋರು.

ಮಂಜ ಎಂತೆಂಥವೋ ಹಾಡು ಹೇಳ್ತಾನಂತ ಸುದ್ದಿ ಮುರಗಿ ಮೇಷ್ಟರಿಗೆ ಹೋಯ್ತು. (ನಮ್ಮಂಥಾ ಸಾಬರ ಹುಡುಗರಿಗೆ ಮುರುಗೇಂದ್ರಯ್ಯ ಮೇಷ್ಟ್ರು ಅನ್ನಲು ನಾಲಗೆ ತಿರುಗದೇ ಮುರಗಿ ಮೇಷ್ಟ್ರು ಅಂತಿದ್ವಿ!)

ಮಂಜನ ಹೆಸರು ಕರೆದರು. ಬಂದ ನಿಂತ. ಹಾಡು ಅಂದ್ರು ಹಾಡಿದ.

'ಜಂಗಮರು ನಾವು ಜಂಗಮರು
ಕಲ್ಯಾಣ ಮಠದಿಂದ ಬಂದವರು
ಮಾಂಸ ಗೀಂಸ ಮುಟ್ಟೋದಿಲ್ಲ
ಮುಂದಕ್ಕಿಟ್ರೆ ಬಿಡೋದಿಲ್ಲ
ಜಂಗಮರು ನಾವು ಜಂಗಮರು'

ಅಂತ ಶುರು ಮಾಡಿದ. ಎಲ್ಲಾ ಹುಡುಗ್ರು ಉಲ್ಡಾಡಿ ನಕ್ರು. ಮೇಷ್ಟ್ರು ಗರಂ ಆಗಿ ಕಣ್ ಬಿಟ್ಟು, 'ಇನ್ನೊಮ್ಮೆ ಈ ಹಾಡು ಹೇಳಬೇಡ' ಅಂತ ಗದರಿಸಿ ಕಳಿಸಿದರು. ನಮಗೆ ಆ ಕ್ಷಣಕ್ಕೆ ಏನೂ ಅರ್ಥ ಆಗಿರಲಿಲ್ಲ. ಕ್ರಮೇಣ ಬೆಳೆದು ಡಿಗ್ರಿಗೆ ಬಂದಾಗ ಗೊತ್ತಾಗಿದ್ದು ನಮ್ಮ ಮುರ್ಗಿ ಮೇಷ್ಟ್ರು ಜಂಗಮರು, ಸ್ವಾಮ್ಯಾರು ಅಂತ!

ಆಗಿನ ಕಾಲದಲ್ಲಿ ಗುರು ಶಿಷ್ಯ ಬಾಂಧವ್ಯ ಅಷ್ಟೇ. ಜಾತಿಪಾತಿ ಎಂತದ್ದೂ ಇರಲಿಲ್ಲ. ಈಗ? ಬಿಡಿ ಹೋಗಲಿ.

ಇದೇ ಮಂಜ ಚಿಕ್ಕಬೆನ್ನೂರಿನ ಡ್ರಿಲ್ ಮಾಸ್ತರ್ ಆನಂದಪ್ಪರ ಕೈಲಿ ಸಿಕ್ಕಿಬಿದ್ದಿದ್ದ. ಅಂದರೆ, ಯೋಗ ಮಾಡ್ತಾನಂತ ಅವನ ಮೇಲೆ ಗುರಾನಿ ಚಾಡಿ ಹೇಳಿದ್ದ. ಕರೆಸಿದರು. ಮರದ ಮುರುಕಲು ಟೇಬಲ್ ಮೇಲೆ ಮಾಡೆಂದರು.

ಆಗ ನಮ್ಮದೆಲ್ಲಾ ಖಾಕಿ ನಿಕ್ಕರು, ಬಿಳಿ ಅಂಗಿ, ಅದೂ ಅಂಡಿನ ಹಿಂದೆ ತೇಪೆಮಯ! ಮಂಜ ಟೇಬಲ್ಲು ಹತ್ತಿ ಕೂತ. ದಡಬಡಂತ ಒಂದು ಕಾಲೆತ್ತಿ ತಲೆಯ ಹಿಂಭಾಗ ಕುತ್ತಿಗೆಗೆ ಹಾಕಿದ. ನಂತರ ಉಳಿದ ಮತ್ತೊಂದು ಕಾಲೆತ್ತಿ ಆ ಕಡೆಯಿಂದ ಅದನ್ನೂ ಸಲೀಸಾಗಿ ಹಾಕಿ ಕೂತ. ನಾವೆಲ್ಲಾ ಕೂತ ಮರದ ಮಣೆ ಬಡಿ ಬಡಿದು ನಕ್ಕಿದ್ವಿ. ಆನಂದಪ್ಪ ಸರ್ ಮಂಜನ ಹಿಂದೆ ಕೂತಿದ್ರು. ಅವರಿಗೆ ಏನೂ ಅರ್ಥ ಆಗಲಿಲ್ಲ.

'ಯಾಕ್ರಲೆ' ಅಂತ ಬಂದು ಎದುರಿಗೆ ನೋಡಿದಾಗಲೇ ತಿಳಿದಿದ್ದು... ಆ ಸಣ್ಣ ನಿಕ್ಕರಲ್ಲಿ ಮಂಜನ ಸರ್ವಾಂಗ ದರ್ಶನವಾಗಿ ಹುಡುಗರೆಲ್ಲಾ ಕೇಕೆ ಹೊಡಿತಾ ಇದ್ದದ್ದು ಅಂತ.